ಕರ್ನಾಟಕ ಸರ್ಕಾರ
ಉಪತಹಶೀಲ್ದಾರರವರ ನ್ಯಾಯಾಲಯ
ಉಪತಹಶೀಲ್ದಾರವರ ನಾಡಕಛೇರಿ, ಹಂಪಸಾಗರ

ಸಂ/ಕಂ/ಪಹಣಿ/ವಿವಾದ/14/2015-16 ದಿ.31.3.16

ಉಪಸ್ಥಿತರು :- ಶ್ರೀ ಎ.ಚಂದ್ರನಾಯಕ, ಉಪತಹಶೀಲ್ದಾರರು
ನಾಡಕಛೇರಿ ಹಂಪಸಾಗರ

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಕೆ.ಬಸಪ್ಪ ತಂದೆ ದಿ॥ ಕೆ.ಮಲ್ಲಪ್ಪ<br>ಗ್ರಾಮ ಮೋರಿಗೇರಿ | ಶ್ರೀ ಕೆ.ಮಲ್ಲಪ್ಪ<br>ತಂದೆ ಬಸಪ್ಪ<br>ಮೋರಿಗೇರಿ ಗ್ರಾಮ |

**ವಿಷಯ :- ಮೋರಿಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 615/ಎ ಪೈಕಿ ವಿಸ್ತೀರ್ಣ 1-05 ಎಕರೆ ಜಮೀನು ಕ್ರಯದಾರರ ಹೆಸರಿನಲ್ಲಿ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು ವಿಚಾರಣೆ.**

ಪೀಠಿಕೆ :-

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಮೋರಿಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 615ಎ ಪೈಕಿ ವಿಸ್ತೀರ್ಣ 1-05 ಎಕರೆ ಜಮೀನು ಕ್ರಯಪತ್ರ ಸಂಖ್ಯೆ ಹೆಚ್.ಬಿ.ಹೆಚ್./1/00200/2015-16 ದಿನಾಂಕ: 18/04/2015 ರಂದು ಪಹಣಿ ದಾಖಲು ಹಕ್ಕುದಾರರಾದ ಕೊ॥ಚಂದ್ರಶೇಖರ್ ತಂದೆ ಕೊಟ್ರಪ್ಪ 1) ಕೊ॥ ಮಂಜುನಾಥ ತಂದೆ ಕೊಟ್ರಪ್ಪ 2) ಕೊ॥ ಚಂದ್ರ ತಂದೆ ಕೊಟ್ರಪ್ಪ 3) ಕೊ॥ಕೊಟ್ರೇಶ ತಂದೆ ಕೊಟ್ರಪ್ಪ 4) ಕೊ॥ ಗಂಗಮ್ಮ ಗಂಡ ದಿ॥ ಕೊಟ್ರಪ್ಪ 5) ಕೊ॥ಬಸಪ್ಪ ತಂದೆ ಮಲ್ಲಪ್ಪ 6) ಕೊ॥ ಗುರುಬಸಮ್ಮ ಗಂಡ ದಿ॥ ಸಣ್ಣ ತಮ್ಮಪ್ಪ ಇವರಿಂದ ವಾದಿಗಳು ಕ್ರಯಕ್ಕೆ ಹೊಂದಿರುತ್ತಾರೆ. ಕ್ರಯ ವಹಿವಾಟು ತಾಲೂಕು ಭೂಮಿಕೇಂದ್ರದಲ್ಲಿ ದಾಖಲಾಗಿ ವಹಿವಾಟು ಸಂಖ್ಯೆ 319 ಮತ್ತು ಹಕ್ಕು ಬದಲಾವಣೆ ಸಂಖ್ಯೆ 128/2014-15 ರಂತೆ ದಾಖಲಾಗಿ ಹಕ್ಕು ಬದಲಾವಣೆಗೆ ಸಂಬಂಧಿಸಿದ ನಮೂನೆ 12 ಹಾಗೂ ನೋಟೀಸು ನಮೂನೆ 21 ಹಕ್ಕು ಬದಲಾವಣೆ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಹೋಬಳಿ ಇವರ ದ್ವಾರ ಗ್ರಾಮ ಲೆಕ್ಕಾಧಿಕಾರಿ ಮೋರಿಗೇರಿ ಇವರಿಗೆ ರವಾನಿಸಲಾಗಿ ಗ್ರಾಮ ಲೆಕ್ಕಾಧಿಕಾರಿ ಮೋರಿಗೇರಿ ಇವರು ನಮೂನೆ 12 ಹಾಗೂ ನೋಟೀಸು ನಮೂನೆ 21 ಜಾರಿ ಮಾಡಿರುತ್ತಾರೆ. ಜಾರಿ ಮಾಡಲಾಗಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳು ಭೂಮಿ ಕೇಂದ್ರದಲ್ಲಿ ತಕರಾರು ಸ್ವೀಕೃತಿ ಸಂಖ್ಯೆ 8159/2014-15 ರಂತೆ ತಕರಾರು ದಾಖಲಾಗಿರುತ್ತದೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸುತ್ತಾ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ದಿನಾಂಕ: 10-06-2015 ರಿಂದ ವಿಚಾರಣೆ ಪ್ರಾರಂಭಿಸಿ

ದಿನಾಂಕ: 31-03-2016 ರವರೆಗೆ ವಿಚಾರಣೆ ನಡೆಸಲಾಯಿತು. ಪ್ರಕರಣದಲ್ಲಿ ವಾದಿಗಳು ಹಾಜರಾಗಿದ್ದು ಪ್ರತಿವಾದಿಗಳ ಪರವಾಗಿ ಯಂ.ಕೊಟ್ರೇಶ್ ನ್ಯಾಯವಾದಿಗಳು ವಕಾಲತ್ ವಹಿಸಿರುತ್ತಾರೆ. ವಾದಿ ಪ್ರತಿವಾದಿಗಳು ಪ್ರಕರಣದಲ್ಲಿ ಹಾಜರಾಗಿದ್ದು ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲಿಸಲಾಗಿ ವಿವಾದಿತ ಆಸ್ತಿಯು ಕ್ರಯಪತ್ರ ಸಂಖ್ಯೆ ಹೆಚ್.ಬಿ.ಹೆಚ್/1/00200/2015-16 ರಂತೆ ದಿನಾಂಕ: 18/11/2015 ರಂದು ನೊಂದಣಿಯಾಗಿರುತ್ತದೆ. ಹಾಗೂ ವಿಕ್ರಯದಾರರು ಜಂಟೀ ಹಕ್ಕುದಾರರಾಗಿದ್ದು ಮಾರಾಟ ಮಾಡುವ ಪೂರ್ವದಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಆಸ್ತಿಯನ್ನು ತಾಲೂಕು ಮೋಜಣಿದಾರರಿಂದ ಅಳತೆ ಮಾಡಿಸುತ್ತ ನಿಯಮಾನುಸಾರ 11-ಇ ನಕ್ಷೆ ಸಂಖ್ಯೆ 12020813862555001 ರಂತೆ ಪಡೆದು ನೊಂದಣಿ ಮಾಡಿಸಿಕೊಟ್ಟಿರುತ್ತಾರೆ. ಪ್ರತಿವಾದಿಗಳು ತಮ್ಮ ತಕರಾರನ್ನು ಸಲ್ಲಿಸಿರುವುರಾದರೂ ನಿರ್ಧಿಷ್ಟ ಸಂಗತಿ ಹಾಗೂ ಸಕಾರಣಗಳನ್ನು ಉಲ್ಲೇಖಿಸಿರುವುದಿಲ್ಲ. ಪ್ರಕರಣದಲ್ಲಿನ ಪ್ರತಿವಾದಿ ನ್ಯಾಯವಾದಿಗಳು ಯಾವುದೇ ಲಿಖಿತ ವಾದವನ್ನು ಮಂಡಿಸಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಕಂಡ ನ್ಯಾಯಾಲಯವು ಕ್ರಯಪತ್ರ, ಪಹಣಿ, 11-ಇ ನಕ್ಷೆ ಪರಿಶೀಲಿಸಲಾಗಿ ಕ್ರಯ ವ್ಯವಹಾರವು ನಿಯಮಾನುಸಾರ ನಡೆದಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಮೋರಿಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 615ಎ ಪೈಕಿ ವಿಸ್ತೀರ್ಣ 1-05 ಎಕರೆ ಜಮೀನನ್ನು ಕರ್ನಾಟಕ ಭೂಕಂದಾಯ ಅಧಿನಿಯಮ ಕಲಂ 128 ಹಾಗೂ 129 ರಡಿಯಲ್ಲಿ ಕ್ರಯದಾರರಾದ ಶ್ರೀ ಕೆ.ಬಸಪ್ಪ ತಂದೆ ಕೆ.ಮಲ್ಲಪ್ಪ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ಆದೇಶವನ್ನು ತೆರೆದ ನ್ಯಾಯಾಲದಲ್ಲಿ ದಿನಾಂಕ:...3.1.3.16ರಂದು ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಗಳು :
1) ವಾದಿ + ಪ್ರತಿವಾದಿಗಳು
2) ಭೂಮಿ ಕೇಂದ್ರ ತಾಲೂಕು ಕಛೇರಿ
3) ಹೆಚ್ಚುವರಿ ಪ್ರತಿಕಡತಕ್ಕೆ